doc-420
T.P-2

(1)

R No KRNN 12 ಶ 20-12-1974

in ★★★★★ 58 th Year ನೇ ವರ್ಷ

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
- For Influential Publicity -

ಪ್ರಕಾಶಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರಧುರೀಣ ಎಂ. ಎಸ್. ಕೃಷ್ಣರಾವ್ | 3 ಸ.ಪ

ಪಾರ್ಲಿಮೆಂಟ ಸದಸ್ಯರಿಗೆ ಅಧಿಕ ಭತ್ತ

ಪಾರ್ಲಿಮೆಂಟಿನ ತನಿಖೆಗೆ ಅವಕಾಶ ಇನ್ನೆಯೆಂಬ ಅಭಿಪ್ರಾಯ

ಲೈಸನ್ಸ್ ಸ್ಕ್ಯಾಂಡಲ್‌ನ ಸಿ ಬಿ ಐ ವರದಿ ಓದಿದ ವಿರೋಧ ಪಕ್ಷಗಳ ನಾಯಕರು ಈ ಸಾಕ್ಷ್ಯಗಳು ಪಾರ್ಲಿಮೆಂಟಿನ ತನಿಖೆಗೆ ಅವಶ್ಯಕ ಇತ್ತಿದೆ ಎಂದು ಲೋಕಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿರುವರು

★★

ತೊಂಬತ್ತು ನಿಮಿಷಗಳ ವರೆಗೆ ಧರಣ

ತಮಿಳುನಾಡು ಶಾಸನಸಭೆಯಲ್ಲಿ ಆಡಳಿತ ಡಿ ಎಂ ಕೆ ಪಕ್ಷದ ಶ್ರೀ ಸುಬ್ಬು ಹೇಳಿದ ಕೆಲವು ಮಾತುಗಳನ್ನು ರಿಕಾರ್ಡಿನಿಂದ ಸ್ಪೀಕರ್ ತೆಗೆದುಹಾಕಿದ ಮತ್ತು ಇದು ಸರಿಯಲ್ಲವೆಂದು ಪ್ರತಿಭಟಿಸಿದ್ದಕ್ಕಾಗಿ ಅಣ್ಣಾ ಡಿ ಎಂ ಕೆ ಸದಸ್ಯ ಶ್ರೀ ಹಂಡೆಯವರನ್ನು ಹೊರಕ್ಕೆ ಹಾಕಿಲಾಯಿತು ಪ್ರತಿಭಟನೆ ಮಾಡಿದ ವಿರೋಧ ಪಕ್ಷದ ಸಹಸ್ಯರು ಲಾಬಿಯಲ್ಲಿ 90 ನಿಮಿಷ ಘೋಷಣೆ ಕೂಗುತ್ತಾ ಧರಣ ಆಚರಿಸಿದರು ಹೊಡೆದು ಹಾಕಿದ ಭಾಗವನ್ನು ಮತ್ತೆ ಸೇರಿಸುವುದಾಗಿ ಸ್ಪೀಕರರು ತಿಳಿಸಲು ಸತ್ಯಾಗ್ರಹ ನಿಂತಿತು

★★

ಅಕ್ರಮ ಸಾಗಾಣಿಕೆಗಾರರ ಮತ್ತೆ ಬಂಧನ

ಮತ್ತೆ ಜಾರಿಗೆ ಬಂದ ಶಾಸನದ ಪ್ರಕಾರ ಬಿಡುಗಡೆ ಮಾಡಲ್ಪಟ್ಟ ಕಳ್ಳಸಾಗಾಣಿಕೆಗಾರರು ದೇಶದ ವಿವಿಧ ಭಾಗಗಳಲ್ಲಿ ಮತ್ತೆ ಬಂಧಿತರಾದರೆಂದು ನವ ದೆಹಲಿ ವರದಿ ತಿಳಿಸುತ್ತದೆ. ಅಕ್ರಮ ಸಾಗಾಣಿಕೆಗಾರರು ನ್ಯಾಯಾಲಯಕ್ಕೆ ಹೋಗುವ ಅವಕಾಶವನ್ನು ಈ ಶಾಸನ ತಪ್ಪಿಸಿದೆ.

★★

ಮಾಜಿ ವಿದೇಶಾಂಗ ಮಂತ್ರಿಯ ಬಿಡುಗಡೆ

ದೇಶಕ್ಕೆ ಕೈ ಬಾಂಬುಗಳನ್ನು ಅಕ್ರಮ ಸಾಗಾಣಿಕೆ ಮಾಡಿದ್ದಕ್ಕಾಗಿ 6 ದಿನಗಳು ಪ್ರಶ್ನೆಗಾಗಿ ಬಂಧಿಸಲ್ಪಟ್ಟಿದ್ದ ಮಾಜಿ ನೇಪಾಳ ವಿದೇಶಾಂಗ ಮಂತ್ರಿ ಶ್ರೀ ರಿಷಿಕೇಷ ಷಾ ಬಿಡುಗಡೆ ಆದರೆಂದು ಖಟಮಂಡು ವಾರ್ತೆ

★

ವಿಶ್ವಸಂಸ್ಥೆ ಹಣ ಕೊಡಲು ನಿರಾಕರಿಸಿತು

ಟೆಲೆ ಏರಿಕೆಯಿಂದ ತೀವ್ರ ಸಂಕಟಕ್ಕೆ ಈಡಾಗಿರುವ ದೇಶಗಳ ಸಹಾಯಕ್ಕಾಗಿ ಸ್ಥಾಪಿಸಿರುವ ನಿಧಿಗೆ ತಾನು ಹಣ ಕೊಡುವದಿಲ್ಲವೆಂದು ವಿಶ್ವಸಂಸ್ಥೆ ತಿಳಿಸಿದೆ

●

ಕೃತಕ ಔಷಧಗಳೇ ಹೆಚ್ಚೆಂದು ಹೇಳಿಕೆ

ದೇಶದಲ್ಲಿ ಮಾರಲಾಗುತ್ತಿರುವ 3200 ಔಷಧಿಗಳಲ್ಲಿ ಬಹು ಹೆಚ್ಚಿನ ಸಂಖ್ಯೆಯವು ಜೋಟಾಗಳೆಂದು ಮತ್ತು 3200 ಔಷಧಗಳ ಫಾರ್ಮುಲೇಟರುಗಳಲ್ಲಿ 800 ವಿಳಾಸಗಳು ಕೃತಕವೆಂದು ಡಾ|| ಡಂಟಿ ಪತ್ರಿಕೆಯವರಿಗೆ ಬೊಂಬಾಯಿನಲ್ಲಿ ತಿಳಿಸಿದರು

ಹೊಟೇಲ್ ಅಭಿವೃದ್ಧಿ

ಮೈಸೂರು ಲಲಿತ ಮಹಲ್ ಹೊಟೇಲಿಗೆ 75 ಲಕ್ಷ ರೂಪಾಯಿಗಳ ಖರ್ಚಿನಿಂದ ಸರ್ವ ಸೌಕರ್ಯಗಳಿಂದ ಕೂಡಿದ 50 ಕೊಠಡಿಗಳನ್ನು ಸೇರಿಸಲಾಗುವುದೆಂದೂ 2 ವರ್ಷಗಳಲ್ಲಿ ಇದು ಸಿದ್ಧವಾಗುವುದೆಂದು ವ್ಯವಸ್ಥಾಪಕ ಶ್ರೀ ರವಿ ಚಿರ್ವಾತಿಸಿದರು

●

ಮಸೂದೆ ಮಂಡನೆ

ಪಾರ್ಲಿಮೆಂಟು ಸದಸ್ಯರ ರಸ್ತೆ ಭತ್ಯವನ್ನು 32 ಪೈಸೆಗಳಿಂದ ಒಂದು ರೂಪಾಯಿಗೆ ಹೆಚ್ಚಿಸುವ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಲಾಯಿತು.

★

ಬಂಧನ

ಗುಲ್ಬರ್ಗಾದಿಂದ ಬಂದಿರುವ ವರದಿಯು ಪ್ರಕಾರ, ಕಮಲಾಪುರದಲ್ಲಿ ಒಬ್ಬ ಹರಿಜನ ಹುಡುಗಿ ಕೊಲೆ ಸಂಬಂಧವಾಗಿ ಮಾಜಿ ಶಾಸಕ ಮತ್ತು ಕಾಂಗ್ರೆಸ್ ನಾಯಕ ಶಂಕರಶೆಟ್ಟಿ ಪಾಟೀಲರ ಮಗ ಮತ್ತಿತರ ಇಬ್ಬರ ಮೇಲೆ ಕೊಲೆ ಆಪಾದನೆಗಾಗಿ ಮ್ಯಾಜಿಸ್ಟ್ರೇಟರ ಮುಂದೆ ಹಾಜರು ಮಾಡಲ್ಪಟ್ಟು ಜನವರಿ 2 ರ ವರೆಗೆ ರಿಮ್ಯಾಂಡು ಮಾಡಲಾಯಿತು

★

ಭೂತಾನು ದೊರೆ

ಭೂತಾನು ದೊರೆ ಬುಧವಾರ ನವ ದೆಹಲಿಗೆ ಆಗಮಿಸಿದಾಗ ಅಧ್ಯಕ್ಷ ಅಹಮದ್ ರವರು ಮತ್ತು ಪ್ರಧಾನಿ ಇಂದಿರಾರವರು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು ಈ ಎರಡು ದೇಶಗಳ ವಿದೇಶಾಂಗ ನೀತಿ ಈ ಮುಂಚಿನಂತೆ ನಡೆಯುವ ಕುರಿತು ರಾಜರಿಗೂ ಪ್ರಧಾನರಿಗೂ ಒಪ್ಪಿತವಾಯಿತು. ಈ ಎರಡು ದೇಶಗಳ ಪ್ರತಿನಿಧಿಗಳಲ್ಲಿ ಆಗಾಗ್ಗೆ ಮಾತುಕತೆ ಇರುವ ಕುರಿತು ಒಪ್ಪಿತವಾಯಿತು.

ಪಾರ್ಲಿಮೆಂಟಿನ ಅನುಮೋದನೆ

ರಾಜಕೀಯ ಪಕ್ಷ, ಯಾವುದಾಹರೂ ಸಂಸ್ಥೆ ಅಥವಾ ಚುನಾವಣೆಯ ಉಮೇದುವಾರರಲ್ಲದ ಬೇರೆ ವ್ಯಕ್ತಿ, ಚುನಾವಣೆಯಲ್ಲಿ ಮಾಡುವ ಖರ್ಚು ಉಮೇದುವಾರರ ಶಾಸನಾವಧಿ ಖರ್ಚಿನಲ್ಲಿ ಒಳಪಡುವುದಿಲ್ಲವೆಂಬ ಮಸೂದೆಗೆ ಪಾರ್ಲಿಮೆಂಟು ಅಸ್ತು ಎಂದಿತು.

★

ಜಾತಿಪದ್ಧತಿ

ಮೈಸೂರು— ಜಾತಿ ಪದ್ಧತಿಯು ಸಮಾಜ ಬದಲಾವಣೆಗೆ ಅಂತಹ ಪ್ರತಿಬಂಧವಲ್ಲವೆಂದೂ ಉಷ್ಮಾನಿಯ ವಿಶ್ವವಿದ್ಯಾಲಯದ ಪ್ರೊಫೆಸರ್ ಡಾ || ಪಾಲ್ ಹೇಳಿದರು — ಬದಲಾವಣೆ ತರಲು ವಿದ್ಯಾಭ್ಯಾಸವು ಒಂದು ಸ್ವಾಭಾವಿಕ ಅಂಶವೆಂದು ಹೇಳಿದರು.

★

ಪದ್ಮಶ್ರೀ ವಾಪಸ್ಸು

ನವಹಳ್ಳಿ— ಬೀಹಾರಿನಲ್ಲಿಯ ಪರಿಸ್ಥಿತಿಯನ್ನು ಪ್ರತಿಭಟಿಸಿ ಖ್ಯಾತ ಹಿಂದಿ ಸಾಹಿತಿ ಶ್ರೀ ಫಾಣೇಶ್ವರನಾಥ್ ರೇಣುರವರು ಅವರಿಗಿತ್ತಿದ್ದ ಪದ್ಮಶ್ರೀ ಅವಾರ್ಡ್‌ನ್ನು ವಾಪಸ್ಸು ಮಾಡಿರುವರೆಂದು ಲೋಕಸಭೆಯಲ್ಲಿ ತಿಳಿಸಲಾಯಿತು

○

ಕೊಂಡಿರುವ ಆಹಾರಧಾನ್ಯ

ನವದೆಹಲಿ— ಗೋಧಿ ಮತ್ತು ಮಿಲೊ ವಿನ 4 ರ ಮಿಲಿಯ ಟ್ಸ್ ಆಹಾರಧಾನ್ಯವು ವಾಣಿಜ್ಯ ರೀತಿ ಕೊಳ್ಳಲಾಗಿದೆ ಎಂದು ತಿಳಿಸಲಾಯಿತು.

★

ಬಹಿರಾಕಾಶಕ್ಕೆ ಮಾನವನಿಲ್ಲ

ನವದೆಹಲಿ— ಭಾರತವು ಬಹಿರಾಕಾಶಕ್ಕೆ ಮಾನವನನ್ನು ಕಳುಹಿಸುವುದಿಲ್ಲವೆಂದು ಹೇಳಲಾಗಿದೆ.

ಪ್ರಾರಂಭೋತ್ಸವ

ಪಿರಿಯಾಪಟ್ಟಣ ತಾಲ್ಲೂಕು ಸುಂಡುವಾಳುವಿನಲ್ಲಿ ಪೂಶನ ಶಾಲಾ ಕಟ್ಟಡದ ಪ್ರಾರಂಭೋತ್ಸವವನ್ನು ನಾಳೆ ಬೆಳಿಗ್ಗೆ 11-30 ಗಂಟೆಗೆ ಮುಖ್ಯ ಮಂತ್ರಿಯವರಾದ ಶ್ರೀ ಡಿ ದೇವರಾಜ ಅರಸ್ ರವರು ನೆರವೇರಿಸುವರು ಲೋಕೋಪಯೋಗಿ ಮಂತ್ರಿಯವರಾದ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಅಧ್ಯಕ್ಷತೆ ವಹಿಸುವರು

ಚಹಾಕೂಟ

ಮೈಸೂರಿನ ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ರಾಜ್ಯ ಪ್ರಶಸ್ತಿ ವಿಜೇತರಾದ ಶ್ರೀ ಅಗರಂ ರಂಗಯ್ಯನವರ ಗೌರವಾರ್ಥ ನಾಳೆ ಸಂಜೆ 6 ಗಂಟೆಗೆ ದಾಸಪ್ರಕಾಶ ಹೊಟೇಲ್‌ನಲ್ಲಿ ಚಹಾ ಕೂಟ ಏರ್ಪಡಿಸಿರುವರು ಮೈಸೂರು ವಿಭಾಗ ಅಧಿಕಾರಿಯವರಾದ ಶ್ರೀ ಸಾಮುಯೆಲ್ ಅಪ್ಪಾಜಯನವರು ಅಧ್ಯಕ್ಷತೆ ವಹಿಸುವರು

ದೀಪ ಹೋಗಿ ದೀಪ ಬಂತು

ಅಖಿಲ ಕರ್ನಾಟಕ ವೀನುಗಾರರ ಪರಿಷತ್ತನ್ನು ಮುಖ್ಯ ಮಂತ್ರಿ ಶ್ರೀ ಡಿ ದೇವರಾಜ ಅರಸ್ ರವರು ಉದ್ಘಾಟಿಸಿದಾಗ ವಿದ್ಯುಚ್ಛಕ್ತಿ ದೀಪ ನಿಂತುಹೋಗಿದ್ದಿತೆಂದು ಕಾರವಾರ ವಾರ್ತೆ. ಮುಖ್ಯ ಮಂತ್ರಿಗಳು ದಾಂಡೇಲಿಗೆ ಹೊರಟಾಗ ದೀಪ ಬಂತು.

Contribute Liberally

to the National Defence Fund

For Holdalls, Kit Bags, & Suit Cases

ಹೋಲ್ಡ್ ಆಲ್, ಕಿಟ್ ಬ್ಯಾಗ್, ಸೂಟ್‌ಕೇಸುಗಳಿಗೆ

ಬ್ಯಾಂಕ್‌ರೋಡ್‌ಬಾಹು ಸಾರ್

Fair Price Shop in Actual Practice

ಭಾರತದಲ್ಲಿ ಗೋವಧೆ

ಪೂರ್ಣ ನಿಶ್ಶೇಧವಾಗಲಿ



Protect the Cow

ವುಡ್‌ಲಾಂಡ್ಸ್ 13 12 74 ರಿಂದ

ಅವೋಘ 2 ನೇ ವಾರ

ಅಪೂರ್ವ ಈಸ್ಟ್‌ಮನ್ ಕಲರ್ ಮಲಯಾಳಂ ಕಲಾಕೃತಿ

ಚೆಟ್ಟಿಕ್ಕಾರಿ

ಪಾತ್ರ — ಲಕ್ಷ್ಮೀ ಮೋಹನ್ ದಿನ 14 ಪ್ರದರ್ಶನಗಳು

ಅಪೇರಾ 17 12 74 ರಿಂದ

ಎ ವಿ ಎಂ ರಾಜನ್ ಎಂ ಆರ್ ಆರ್ ವಾಸು ವಿಜಯ ಕುಮಾರಿ ಜಯ ಅಭಿನಯಿಸಿರುವ

ಅವೋಘ ತಮಿಳು ಚಿತ್ರ

ಮಗಳುಕ್ಕಾಗ

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Quality Printing Neat Binding

Lakshminarasimha Press

Sivarampet, Mysore 1

Help The Gorakshana

—HumanitarianPropeganda Monthly—

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajaputam Mysore